ದಿನಾಂಕ: ಫೆಬ್ರವರಿ 13, 2014

## ಮೋದಿ ಅವರನ್ನು ಭೇಟಿ ಮಾಡಿದ ಪೋವೆಲ್, ಅಮೇರಿಕ ಆಂತರಿಕ ಪರಿಷ್ಕರಣೆ

–ಅರುಣ್ ಜೇಟ್ಲಿ

ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಗುಜರಾತ್ ಮುಖ್ಯ ಮಂತ್ರಿ ಶ್ರೀ ನರೇಂದ್ರ ಮೋದಿ ಅವರನ್ನು ಅಮೇರಿಕ ರಾಯಭಾರಿ ಕು.ನ್ಯಾನ್ಸಿ ಪೋವೆಲ್ ಇಂದು ಭೇಟಿ ಮಾಡಿದ್ದಾರೆ. ಗುಜರಾತ್ ಮುಖ್ಯ ಮಂತ್ರಿಯವರೊಂದಿಗೆ ಅಮೇರಿಕದ ಆಡಳಿತ ಮರು ಸಂಬಂಧ ಕಲ್ಪಿಸಲು ಭಾರತದ ದೇಶೀಯ ಪರಿಸ್ಥಿತಿಯ ಸ್ವಯಂ ಪ್ರೇರಿತ ಅಧ್ಯಯನವೇ ಕಾರಣವೆಂದು ಅನಿಸುತ್ತಿದೆ. ಅಮೇರಿಕ ಆಡಳಿತದ ಆಂತರಿಕ ಪರಿಷ್ಕರಣೆ ಇದು ಎಂಬ ಅಭಿಮತ ನನ್ನದು. ಈ ಹಿಂದೆ ಭಾರತದ ಓರ್ವ ಚುನಾಯಿತ ಪ್ರತಿನಿಧಿಯೊಂದಿಗೆ ಸಂಬಂಧ ಕಡಿದುಕೊಳ್ಳುವ ನಿರ್ಣಯವೂ ಯಾವುದೇ ಗುರುತರ ಸಾಕ್ಷ್ಯಾಧಾರಗಳು ಅಥವಾ ನ್ಯಾಯಾಲಯದ ತೀರ್ಪನ್ನು ಆಧರಿಸಿರಲಿಲ್ಲ ಎಂಬ ನಂಬಿಕೆ ನನ್ನದು. ಮಾಧ್ಯಮ ಹಾಗೂ ಕೆಲವು ಸರ್ಕಾರೇತರ ಸೇವಾ ಸಂಸ್ಥೆಗಳ ಅಬ್ಬರದ ಅಪಪ್ರಚಾರವನ್ನು ಅದು ಆಧರಿಸಿದೆ.

ಭೇಟಿಯು ರಾಜತಾಂತ್ರಿಕ ಪ್ರಕ್ರಿಯೆಯ ಭಾಗವಾಗಿತ್ತು ಎಂಬ ಅನಿಸಿಕೆ ಭಾಜಪ ಹೊಂದಿದೆ. 2014ರ ಸಾರ್ವತ್ರಿಕ ಚುನಾವಣೆಯಲ್ಲಿ ಗುಜರಾತ್ ಮುಖ್ಯಮಂತ್ರಿ ನಿಸ್ಸಂದೇಹವಾಗಿ ಅಗ್ರಸ್ಥಾನದಲ್ಲಿದ್ದಾರೆ. ಅವರು ರಾಜ್ಯ ವಿಧಾನ ಸಭೆ ಚುನಾವಣೆಗಳನ್ನು ಮೂರು ಬಾರಿ ಸ್ಪಷ್ಟ ಬಹುಮತದೊಂದಿಗೆ ಗೆದ್ದಿದ್ದಾರೆ. ಅವರೊಂದಿಗೆ ಈ ಹಿಂದೆ ಕೆಲವು ರಾಷ್ಟ್ರಗಳು ಸಂಬಂಧ ಹೊಂದದೆ ಇರುವ ನಿರ್ಧಾರವು ಭಾರತದ ವಿದೇಶಾಂಗ ನೀತಿಯ ವೈಫಲ್ಯವೆಂದೇ ಹೇಳಬೇಕಾಗುತ್ತದೆ. ಭಾರತದ ಚುನಾಯಿತ ಪ್ರತಿನಿಧಿಗಳೊಂದಿಗೆ ಸಂಬಂಧ ಕಲ್ಪಸುವ ಅಥವಾ ಕಡಿಯುವ ವಿಚಾರದಲ್ಲಿ ಅನ್ಯ ದೇಶ ತೆಗೆದುಕೊಳ್ಳುವ ನಿರ್ಣಯಗಳ ಕುರಿತು ಒಂದು ರಾಜಕೀಯ ಪಕ್ಷವಾಗಲಿ ಅಥವಾ ರಾಜ್ಯ ಸರ್ಕಾರವಾಗಲಿ ಪ್ರತಿಕ್ರಿಯೆ ನೀಡುವ ಆವಶ್ಯಕತೆಯಿಲ್ಲ. ಎಂಇಎ ಅಂದರೆ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಪ್ರತಿಕ್ರಿಯೆ ನೀಡುವ ಹೊಣೆಗಾರಿಕೆ ಹೊಂದಿದೆ. ಯುಪಿಎ ಅಡಿ ಎಂಇಎ ತನ್ನ ಜವಾಬ್ದಾರಿ ನಿಭಾಯಿಸುವಲ್ಲಿ ವಿಫಲವಾಗಿದೆಯೇ? ನಿಸ್ಸಂದೇಹವಾಗಿ ಆಗಿದೆ.

ಭೇಟಿ ಕುರಿತು ವಿದೇಶಾಂಗ ವ್ಯವಹಾರಗಳ ಸಚಿವರಾದ ಶ್ರೀ ಸಲ್ಮಾನ್ ಖುರ್ಷೀದ್ ಅವರ ಪ್ರತಿಕ್ರಿಯೆ ಸ್ವಯಂವೇದ್ಯ. ಕಾಂಗ್ರೆಸ್ ಪಕ್ಷದ ನೈತಿಕ ಮನೋಬಲ ಕುಸಿದಿದೆ. ಅದರ ಭವಿಷ್ಯದ ಚಿತ್ರಣ ಸ್ಪಷ್ಟವಾಗಿದೆ. ಮುಂಬರುವ ಚುನಾವಣೆಯಲ್ಲಿ ಸೋಲು ಕಟ್ಟಿಟ್ಟಬುತ್ತಿ. ತಾರ್ಕಿಕವಾಗಿ ನೋಡಿದರೆ ಹೀನಾಯ ಸೋಲು ಅವರನ್ನು ಕಾದಿದೆ. ಆದರೂ ಅದರ ನಾಯಕರ ಸೊಕ್ಕು ಮುರಿದಿಲ್ಲ. ಕಳೆದ ಕೆಲವು ತಾಸುಗಳ ಅವರ ನಡವಳಿಕೆ ಕಂಡರೆ ಆ ಸೊಕ್ಕು ಕಾಣಬಹುದು. ಭಾರತದ ಚುನಾಯಿತ ಪ್ರತಿನಿಧಿಯ ಗೌರವ ಕಾಪಾಡಬೇಕಾದ ವಿದೇಶಾಂಗ ವ್ಯವಹಾರಗಳ ಸಚಿವರು, ಅಮೇರಿಕ ರಾಯಭಾರಿ ಗುಜರಾತ್ ಮುಖ್ಯ ಮಂತ್ರಿಯನ್ನು ಭೇಟಿ ಮಾಡಿರುವ ವಿಚಾರದಲ್ಲಿ ಬೇಸರಪಟ್ಟಂತಿದೆ.

ಭಾರತ–ಅಮೇರಿಕ ಸಂಬಂಧವು ಭಾರತದ ವಿದೇಶಾಂಗ ನೀತಿಯ ಪ್ರಮುಖ ಸ್ತಂಭವಾಗಿದೆ. ಎರಡೂ ರಾಷ್ಟ್ರಗಳ ನಡುವೆ ಉತ್ತಮ ಸಂಬಂಧ ಕಲ್ಪಸಲು ಶ್ರೀ ಅಟಲ್ ಬಿಹಾರಿ ವಾಜಪೇಯಿ ಅವರ ನೇತೃತ್ವದ ಎನ್‌ಡಿಎ ಸರ್ಕಾರದ ಮಹತ್ವಪೂರ್ಣ ಕೊಡುಗೆ ಇದೆ. ತಾತ್ಕಾಲಿಕ ಸಮಸ್ಯೆಗಳನ್ನು ಹತ್ತಿಕ್ಕಲು ಸಂಯಮ ಹಾಗೂ ರಾಜನೈತಿಕ ನೈಪುಣ್ಯತೆಯಿಂದ ಸಾಧ್ಯವೆಂದು ಅರ್ಥ ಮಾಡಿಕೊಳ್ಳಬೇಕಾಗಿದೆ. ಸಂಬಂಧದ ಸಮತೋಲನ ಕದಡಲು ಪರ್ಯಾಯ ವಿಚಾರಗಳ ಉತ್ಪ್ರೇಕ್ಷೆ ಸಲ್ಲ.

✶✶✶✶✶